ವಿಶ್ವದ ಜನರ ವಿರುದ್ಧ ವರ್ಗಯುದ್ಧವನ್ನು ಹೇಗೆ ಶುರು ಮಾಡಿದೆ ಎನ್ನುವುದು ಈ ಚರ್ಚೆಗಳಲ್ಲಿ ನಿಚ್ಚಳವಾಗಿದೆ. ಅಮೆರಿಕದ ವಿದೇಶಾಂಗ ನೀತಿಯ ನಿರ್ದಯ ವಿಮರ್ಶಕ ಮತ್ತು ಜಾಗತೀಕರಣದ ವಿರೋಧಿಯಾದ ನೋಮ್ ಚಾಮ್‌ಸ್ಕಿ ಓದುಗರಿಗೆ ತನ್ನ ವಿಶ್ಲೇಷಣೆಗಳ ಮೂಲಕ ಸವಾಲು ಹಾಕುತ್ತಾನೆ, ಹೆಚ್ಚು ಸಕ್ರಿಯವಾಗಿ ಯೋಚಿಸಲು ಪ್ರೋತ್ಸಾಹಿಸುತ್ತಾನೆ. ನಮ್ಮ ಕಾಲದ ಸಮಸ್ಯೆಗಳ ಬಗ್ಗೆ ಹೊಸ ನೋಟವನ್ನು ರೂಪಿಸುತ್ತಾನೆ.

ಆಧುನಿಕ ಆರ್ಥಿಕ ಮತ್ತು ರಾಜಕೀಯ ಕ್ರಮಗಳಿಗೆ ಯಾವ ತಾತ್ವಿಕ ಆಧಾರಗಳು ಕಾರಣವಾಗುತ್ತವೆ? ಅರಬ್ ಜಗತ್ತಿನಲ್ಲಿ ಪ್ರಜಾಪ್ರಭುತ್ವದ ಭವಿಷ್ಯವೇನು? ಯುರೋಪನ್ನು ಆರ್ಥಿಕ ಬಿಕ್ಕಟ್ಟಿಗೆ ತಳ್ಳಿದ ನಿಲುವು ಯಾವುದು? ಇದರ ಬಗ್ಗೆ ವಾದಿಸುತ್ತಾ, ಸ್ವಾತಂತ್ರ್ಯ, ಸಾರ್ವಭೌಮತ್ವ, ಮಾನವ ಹಕ್ಕುಗಳ ಗೌರವದ ಮೌಲ್ಯಗಳ ಬಗ್ಗೆ, ಚಾಮ್‌ಸ್ಕಿ ನಮಗೆ ತಿಳಿದಿರುವ ಸಂಗತಿಗಳೊಂದಿಗೆಯೇ ಕಾರ್ಯನಿರ್ವಹಿಸುತ್ತಾನೆ, ಆದರೆ ಆತನ ವಿಶ್ಲೇಷಣೆಗಳ ಮೂಲಕ ಹೊರಹೊಮ್ಮಿದ ತೀರ್ಮಾನಗಳು ಸಂಪೂರ್ಣವಾಗಿ ಅನಿರೀಕ್ಷಿತ ಮತ್ತು ಅದ್ಭುತವಾಗಿರುತ್ತವೆ.

ಜಾಗತಿಕ ರಾಜಕೀಯದ ಅತ್ಯಂತ ಮೂಲಭೂತ ಸಮಸ್ಯೆಗಳನ್ನು ಚಾಮ್‌ಸ್ಕಿಯ ಚರ್ಚೆಗಳು ಒಳಗೊಳ್ಳುತ್ತವೆ. ಏಕಮೇವ ಚಕ್ರಾಧಿಪತ್ಯ ಪರಿಕಲ್ಪನೆಯನ್ನು ಚಾಮ್‌ಸ್ಕಿ ವಿರೋಧಿಸುತ್ತಾನೆ. ವಿಶ್ವದ ಅತ್ಯಂತ ಪ್ರಕ್ಷುಬ್ಧ ಪ್ರದೇಶಗಳಲ್ಲಿ ಅಮೆರಿಕದ ರಾಜಕೀಯ ಮತ್ತು ಮಿಲಿಟರಿ ಉಪಕ್ರಮಗಳ ಬಗ್ಗೆ ಅತ್ಯಂತ ಕಟುವಾಗಿ ಮತ್ತು ಸ್ಥಿರವಾಗಿ ಟೀಕೆ ಮಾಡುತ್ತಲೇ ಬಂದಿದ್ದಾನೆ. ಇಸ್ರೇಲ್ ಮತ್ತು ಪ್ಯಾಲೆಸ್ಟೈನ್, ಉತ್ತರ ಕೊರಿಯಾ, ಸೋಮಾಲಿಯಾ, ಇರಾಕ್ ಮತ್ತು ಇರಾನ್, ಭಾರತ, ಪಾಕಿಸ್ತಾನ ಮತ್ತು ಮುಖ್ಯವಾಗಿ ತನ್ನ ಸ್ವಂತ ದೇಶವನ್ನು ತೀವ್ರ ವಿಮರ್ಶೆಗೆ ಒಳಪಡಿಸಿದ್ದಾನೆ. ಚಾಮ್‌ಸ್ಕಿ ತನ್ನ ವಿರೋಧಿಗಳೊಂದಿಗೆ ನಿರಂತರವಾಗಿ ನಡೆಸಿದ ಚರ್ಚೆಗಳು ಕೂಡ ಅತ್ಯಂತ ತೀಕ್ಷ್ಣತೆಯಿಂದ ಕೂಡಿವೆ ಹಾಗೂ ರಾಜಕೀಯ ಸನ್ನಿವೇಶವನ್ನು ಅರ್ಥೈಸುವ ಸಾಮರ್ಥ್ಯವನ್ನು ಹೊಂದಿವೆ.

'ಚಾಮ್‌ಸ್ಕಿ ಆನ್ ಅನ್ಯಾರ್ಕಿಸಂ' ಅನ್ನುವ ತನ್ನ ಪುಸ್ತಕದಲ್ಲಿ ಅನ್ಯಾರ್ಕಿಸಂ ಪರಿಕಲ್ಪನೆ ಮತ್ತು ಅದರ ಐತಿಹಾಸಿಕ ಸಂದರ್ಭವನ್ನು ಚಾಮ್‌ಸ್ಕಿ ಪರಿಶೋಧಿಸಿದ್ದಾನೆ. ಸಮಸಮಾಜದ ಕಲ್ಪನೆಯನ್ನು ಪ್ರಚುರಪಡಿಸುವುದರ ಜೊತೆಗೆ ಪ್ರಸ್ತುತ ಸಮಾಜದಲ್ಲಿ ನೆಲೆಗೊಂಡಿರುವ ಹಿಂಸೆ, ದಬ್ಬಾಳಿಕೆಯ ವ್ಯವಸ್ಥೆಗಳಿಗೆ ಸವಾಲೊಡ್ಡುವ ಹಾಗೂ ದಮನಿತ ಸಮೂಹಗಳ ಅದಮ್ಯ ಚೈತನ್ಯವನ್ನು ಪ್ರೇರೇಪಿಸುವ ಕ್ರಿಯಾಶೀಲತೆ ಈ ಅನ್ಯಾರ್ಕಿಸಂ ಪರಿಕಲ್ಪನೆಯ ಪ್ರಮುಖ ಆಶಯವಾಗಿದೆ. ಟಾಲ್‌ಸ್ಟಾಯ್ ಮತ್ತು ಗಾಂಧೀಜಿ ಅವರು ತಮ್ಮನ್ನು ಅನ್ಯಾರ್ಕಿಸ್ಟ್ ಎಂದು ಗುರುತಿಸಿಕೊಂಡಿದ್ದಕ್ಕೆ ಕೂಡ ಅವರು ಆದರ್ಶ ಸಮಾಜದ ಕಲ್ಪನೆಯನ್ನು ಹೊಂದಿದ್ದೇ ಕಾರಣವಾಗಿತ್ತು ಅನಿಸುತ್ತದೆ. ಆದರೆ ಚಾಮ್‌ಸ್ಕಿಯ ದೃಷ್ಟಿಕೋನಗಳು ಬಹುಮುಖ್ಯವಾದ ಒಳನೋಟಗಳನ್ನು ಹೊಂದುವುದರ ಜೊತೆಗೆ ಚಿಂತನಶೀಲವಾಗಿವೆ. ಈ ಪುಸ್ತಕದುದ್ದಕ್ಕೂ ಚಾಮ್‌ಸ್ಕಿ ಚರ್ಚಿಸಿದ ವಿಚಾರಗಳ ಒಟ್ಟು ಗುರಿ ಅಥವಾ ಆಶಯ ಪರ್ಯಾಯ ರಾಜಕೀಯ ಚಿಂತನೆಗೆ ಒತ್ತಾಸೆಯಾಗುವ ಹೊಸ ತಾತ್ವಿಕ ಚೌಕಟ್ಟುಗಳನ್ನು ರೂಪಿಸುತ್ತದೆ.

1960ರ ದಶಕದಲ್ಲಿ ಹೊರಹೊಮ್ಮಿದ ಪಾಶ್ಚಿಮಾತ್ಯ ಬುದ್ಧಿಜೀವಿಗಳಲ್ಲಿ ಚಾಮ್‌ಸ್ಕಿ ಒಬ್ಬರು ಮಾತ್ರ ಇವತ್ತಿಗೂ ಕ್ರಿಯಾಶೀಲವಾಗಿದ್ದಾರೆ. ತಮ್ಮ ಎಡಪಂಥೀಯ ಚಿಂತನೆಯ ಹಾದಿಯನ್ನು 'ಅಮೆರಿಕನ್ ಪವರ್ ಮತ್ತು ನ್ಯೂ ಮ್ಯಾಂಡರಿನ್ಸ್' (1969); 'ಅಟ್ ವಾರ್ ವಿಥ್ ಏಷ್ಯಾ' (1972); 'ಪ್ರಾಬ್ಲಮ್ಸ್ ಆಫ್ ನಾಲೆಡ್ಜ್ ಅಂಡ್ ಫ್ರೀಡಂ' (1971) ಪುಸ್ತಕಗಳಲ್ಲಿ, ಎಡಪಂಥೀಯ ಚಿಂತನೆಯ ತಾತ್ವಿಕತೆ ಮತ್ತು ನುಡಿಗಟ್ಟುಗಳು ಖಚಿತಗೊಂಡಿವೆ. 'ಭಯೋತ್ಪಾದನೆಯ ಸಂಸ್ಕೃತಿ' (1988,) ಸೇರಿದಂತೆ ಹಲವಾರು ರಾಜಕೀಯ ಲೇಖನಗಳಲ್ಲಿ, ಯುನೈಟೆಡ್ ಸ್ಟೇಟ್ಸ್‌ನ ವಿದೇಶಿ ಮತ್ತು ದೇಶೀಯ ನೀತಿಯನ್ನು ಟೀಕಿಸಲಾಗಿದೆ. ವಿಶೇಷವಾಗಿ, ವಿಯೆಟ್ನಾಂ ಯುದ್ಧವನ್ನು ತೀವ್ರವಾಗಿ ಚಾಮ್‌ಸ್ಕಿ ವಿರೋಧಿಸಿದರು. ಮಿಲಿಟರಿ ವೆಚ್ಚವನ್ನು ಪ್ರತಿಭಟಿಸಿ ತೆರಿಗೆ ಪಾವತಿಸಲು ಚಾಮ್‌ಸ್ಕಿ ನಿರಾಕರಿಸಿದರು. 1968ರಿಂದ ಅವರು ವಿಯೆಟ್ನಾಂ ಯುದ್ಧವನ್ನು ಪ್ರತಿಭಟಿಸಲು ನಾಗರಿಕ ಅಸಹಕಾರಕ್ಕೆ ಕರೆ ನೀಡುವ ಚಳವಳಿಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು. ಅಂದಿನಿಂದ ಚಾಮ್‌ಸ್ಕಿ ಕಾಯಂ ಯುದ್ಧ ವಿರೋಧಿ ನೀತಿಯ ಹರಿಕಾರನಾಗಿ ಉಳಿದಿದ್ದಾರೆ.

●